ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 64 ]
Total No. of Questions : 64 ]

**ಸಂಕೇತ ಸಂಖ್ಯೆ : 01-K**
**Code No. : 01-K**

# D

**CCE PR**
**UNREVISED**

**Question Paper Serial No. 50**

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

## ವಿಷಯ : ಪ್ರಥಮ ಭಾಷೆ — ಕನ್ನಡ
## Subject : First Language — KANNADA

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 27. 03. 2020 ] [ Date : 27. 03. 2020

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 125 ] [ Max. Marks : 125

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 64 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತದೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.



https://www.karnatakaboard.com/

## ವಿಭಾಗ – 'ಎ'

### (ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** $16 \times 1 = 16$

1. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು ?
2. ಗೃಹಸ್ಥಾಶ್ರಮವು ಧನ್ಯ ಎಂದು ಹೇಳಿದವರು ಯಾರು ?
3. ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಯಾರು ಯಾರೊಳಗೆ ಸಂವಾದ ನಡೆಯಿತು ?
4. 'ಮಲೆಗಳಲ್ಲಿ ಮದುಮಗಳು' ಯಾರು ಬರೆದ ಕಾದಂಬರಿ ?
5. "ಪೊನ್ನನೆಲ್ಲಮಂ ನೀನೆ ಕೊಂಡೆ" ಎಂದು ಹೇಳಿದವರು ಯಾರು ?
6. ಭಗವದ್ಗೀತೆಯನ್ನು ರಚಿಸಿದವರು ಯಾರು ?
7. ವಾಯುದೇವನ ವರಬಲದಿಂದ ಕುಂತಿಯಲ್ಲಿ ಜನಿಸಿದ ಪವನನಂದನನೆಂದರೆ ಯಾರು ?
8. ಹಕ್ಕಿಯು ಯಾವುದರ ಸಂಕೇತವಾಗಿದೆ ?
9. ಜೇಡರದಾಸಿಮಯ್ಯನವರ ಪ್ರಕಾರ ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ ?
10. ಡಾ. ಜಿ.ಎಸ್. ಶಿವರುದ್ರಪ್ಪನವರ ಪ್ರಕಾರ ನದೀಜಲಗಳು ಏನಾಗಿವೆ ?
11. ಇನತನೂಜನ ಕೂಡೆ ರಥದಲ್ಲಿ ಮೈದುನತನದ ಸರಸವನ್ನು ಎಸಗಿದವರು ಯಾರು ?
12. ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ಯಾರು ಯಾರು ?
13. ಮಾನವನು ಹಮ್ಮಿನಲ್ಲಿ ಬೀಗಿ ಏನು ಮಾಡಿದನೆಂದು ಕವಯಿತ್ರಿ ಹೇಳಿದ್ದಾರೆ ?
14. ಅಜ್ಞಾನ ತೊಲಗಿಸಲು ಕವಯಿತ್ರಿ ಏನಾಗ ಬಯಸಿದ್ದಾರೆ ?
15. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು ?
16. ಪಾರಿವಾಳಗಳು ಏನನ್ನು ಕೇಳಿ ಆನಂದ ಪಟ್ಟವು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $16 \times 2 = 32$

17. ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು ?
18. ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳನ್ನು ತಿಳಿಸಿ.
19. 'ವಚನಧರ್ಮ'ದ ಬಗೆಗೆ ದೇವನೂರರ ಅಭಿಪ್ರಾಯ ಏನು ?
20. ದೇವನೂರರ ಪ್ರಕಾರ ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ್ಯ ಎಂಥದ್ದು ?
21. ದುಷ್ಟಬುದ್ಧಿಯು ಧರ್ಮಬುದ್ಧಿಗೆ ಸಲಹೆ ನೀಡಿದ ಮಾತುಗಳಾವುವು ?
22. ದುಷ್ಟಬುದ್ಧಿಯು ತನ್ನ ತಂದೆಯನ್ನು ಏಕಾಂತಕ್ಕೆ ಏಕೆ ಕರೆದನು ?



https://www.karnatakaboard.com/

23. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?

24. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.

25. ಹಲಗಲಿಗೆ ದಂಡು ಬರಲು ಕಾರಣವೇನು ?

26. ಮಾತಿನ ಮಹತ್ವವನ್ನು ಬಸವಣ್ಣನವರು ಹೇಗೆ ವಿಶ್ಲೇಷಿಸಿದ್ದಾರೆ ?

27. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.

28. ಗಡಿಯ ಆಚೆ–ಈಚೆ ಜೀವಿಗಳು ಏಕೆ ಶವವಾದವು ?

29. ಎಚ್. ನರಸಿಂಹಯ್ಯನವರ ಪ್ರಕಾರ ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ ?

30. ಕವಿ ಪಂಪನು ತನ್ನ ಹೆಸರನ್ನು ಬಂಡೆಯ ಮೇಲೆ ಕೆತ್ತಿಸದಿರಲು ಕಾರಣಗಳೇನು ?

31. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯವಾಗಿತ್ತು ?

32. 'ಬೀಸುಕಲ್ಲು' ಎಂಬ ಅರ್ಥ ಬರಲು ಜನಪದರು ಹೇಳಿದ ಒಗಟನ್ನು ಬರೆಯಿರಿ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :** 6 × 3 = 18

33. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ ?"

34. "ತಾವು ಕಡಿಮೆ ಮಾತನಾಡಿದ್ದೀರಿ ಮತ್ತು ಹೆಚ್ಚು ಕೆಲಸ ಮಾಡಿದ್ದೀರಿ"

35. "ಮಾಹಿತಿಗಳಲ್ಲಾಗಲಿ, ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ."

36. "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"

37. "ನಿಷ್ಠೆಯಿಲದ ಭಕ್ತ ಪಟ್ಟಣದಲ್ಲಿದ್ದಡೂ ಅದು ನಟ್ಟಡವಿ"

38. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

39. ವಿ.ಕೃ. ಗೋಕಾಕ್

40. ಕುಮಾರವ್ಯಾಸ

41. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 4 = 4

ಮತಗಳೆಲ್ಲವೂ ..................................................

....................................................................

....................................................................

...................................................... ಬಿತ್ತೋಣ.

***ಅಥವಾ***



https://www.karnatakaboard.com/

ಕಲುಷಿತವಾದೀ ......................................................

......................................................................

......................................................................

.................................................... ಮುಟ್ಟೋಣ.

42. **ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** $1 \times 4 = 4$

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ–ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ–ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ ?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $2 \times 4 = 8$

43. ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಗೊರೂರರು ಅಮೆರಿಕದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಹೇಗೆ ಪರಿಚಯಿಸಿದರು ?

*ಅಥವಾ*

ವಿದ್ಯುತ್ ಒಲೆಯಿಂದ ಉಂಟಾಗಬಹುದಾಗಿದ್ದ ಅಪಾಯವನ್ನು ಗೊರೂರರು ಹೇಗೆ ಪರಿಹರಿಸಿಕೊಂಡರು ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

44. ದುರ್ಯೋಧನನ ತಂದೆತಾಯಿಯರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ.

*ಅಥವಾ*

ಧೃತರಾಷ್ಟ್ರನು ಸಂಧಿಮಾಡಿಕೊ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು ?

45. **ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** $2 \times 2 = 4$

ನಾಡಿನ ಜಲಸಂಪನ್ಮೂಲಗಳಲ್ಲಿ ನದಿಗಳ ಪಾತ್ರ ಮಹತ್ವದ್ದಾಗಿದೆ. ಇವು ನೀಡುವ ಪ್ರಯೋಜನ ಅಧಿಕ. ನದಿ ಕೇವಲ ಹರಿಯುವ ನೀರಲ್ಲ; ಅದೊಂದು ಮಹಾಶಕ್ತಿ; ಪ್ರಕೃತಿಯ ವರಪ್ರಸಾದ, ಸಸ್ಯ, ಪ್ರಾಣಿ ಮತ್ತು ಮಾನವ ಜಗತ್ತಿನ ಜೀವನಕ್ಕೆ ಇದು ಆಧಾರ. ಕರ್ನಾಟಕ ಸುಂದರ ನದಿಗಳ ನಾಡು. ಕಾವೇರಿ, ಕೃಷ್ಣೆ, ತುಂಗಭದ್ರೆ, ಶರಾವತಿ ಮೊದಲಾದ ನದಿಗಳು ನಾಡಿನ ಭಾಗ್ಯಕ್ಕೆ ಕಾರಣಗಳಾಗಿವೆ. ಸಮೃದ್ಧವಾದ ಬೆಳೆಗೆ, ಜಲ–ವಿದ್ಯುತ್ ಯೋಜನೆಗಳಿಗೆ, ಆರ್ಥಿಕ ವಿಕಾಸಕ್ಕೆ, ಜನತೆಯ ನೆಮ್ಮದಿಗೆ ಇವು ಸಹಾಯಕವಾಗಿವೆ.



https://www.karnatakaboard.com/

ಪಶ್ಚಿಮ ಘಟ್ಟದ ತಪ್ಪಲು ಪ್ರದೇಶದಲ್ಲಿ ಹರಿಯುವ ನದಿಗಳಲ್ಲಿ ಶರಾವತಿಯೂ ಒಂದು. ಇದು ಕೇವಲ 132 ಕಿ.ಮೀ. ಉದ್ದವಿರುವ ನದಿ. ಆದರೆ ತನ್ನ ಅಪಾರ ಜಲನಿಧಿಯಿಂದ ನಾಡಿನ ಅಕ್ಷಯನಿಧಿಯೆನಿಸಿದೆ. ತೀರ್ಥಹಳ್ಳಿ ತಾಲ್ಲೂಕಿನ ಅಂಬುತೀರ್ಥ, ಶರಾವತಿಯ ಉಗಮಸ್ಥಾನ. ಇಲ್ಲಿಯ ಸ್ಥಳಪುರಾಣ ಹೀಗಿದೆ : ರಾಮಲಕ್ಷ್ಮಣರು ಸೀತಾದೇವಿಯನ್ನು ಹುಡುಕುತ್ತಾ ಕರ್ನಾಟಕದ ಈ ಭಾಗಕ್ಕೆ ಬಂದರು. ಮಧ್ಯಾಹ್ನದ ಸಮಯವಾಗಿದ್ದಿತು. ಅರ್ಘ್ಯ ಕೊಡಲು ನೀರು ಎಲ್ಲಿಯೂ ದೊರೆಯಲಿಲ್ಲ. ಆಗ ಶ್ರೀರಾಮನು ವರುಣನನ್ನು ಪ್ರಾರ್ಥಿಸಿ ಒಂದು ಅಂಬನ್ನು ನೆಲಕ್ಕೆ ಪ್ರಯೋಗಿಸಿದನು. ಈ ಅಂಬು ನಾಟಿದ ನೆಲೆಯಿಂದ ನೀರು ಚಿಮ್ಮಿ ಹರಿಯತೊಡಗಿತು. ಅಂಬುತೀರ್ಥ ಉದ್ಭವವಾಯಿತು.

ಪ್ರಶ್ನೆಗಳು :

ಅ) ನದಿಗಳು ಜನತೆಯ ನೆಮ್ಮದಿಗೆ ಹೇಗೆ ಸಹಕಾರಿಯಾಗಿವೆ ಎಂಬುದನ್ನು ವಿವರಿಸಿ.

ಆ) ಶರಾವತಿ ನದಿ ಮೂಲವನ್ನು ಅಂಬುತೀರ್ಥವೆನ್ನಲು ಕಾರಣವೇನು ?

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ ಹಾಗೂ ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 10 × 1 = 10

46. 'ಕೌರವನದೆಸೆಯಿಂದ ಕೇಡಾಯ್ತು' ಈ ವಾಕ್ಯದಲ್ಲಿ ಬಳಕೆಯಾಗಿರುವ ವಿಭಕ್ತಿಯಿದು

(ಎ) ಪ್ರಥಮಾ (ಬಿ) ದ್ವಿತೀಯ

(ಸಿ) ಪಂಚಮೀ (ಡಿ) ಸಪ್ತಮೀ

47. 'ಮಂಡಳೇಶ್ವರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಯಣ್ ಸಂಧಿ (ಬಿ) ವೃದ್ಧಿ ಸಂಧಿ

(ಸಿ) ಸವರ್ಣದೀರ್ಘ ಸಂಧಿ (ಡಿ) ಗುಣ ಸಂಧಿ

48. 'ಹೀಂಗ' ಪದದ ಗ್ರಾಂಥಿಕ ರೂಪವಿದು

(ಎ) ಹೀಗೆ (ಬಿ) ಹಾಗೆ

(ಸಿ) ಹೇಗೆ (ಡಿ) ಹೋಗೆ

49. "ಮಹಾಶಕ್ತನಾದ ದೇವರು ಸಮಸ್ತ ಲೋಕಗಳನ್ನು ಪ್ರೀತಿಯಿಂದ ಕಾಪಾಡುವನು." ಈ ವಾಕ್ಯವು

(ಎ) ನಿಷೇಧಾರ್ಥಕ ವಾಕ್ಯ (ಬಿ) ಸಾಮಾನ್ಯ ವಾಕ್ಯ

(ಸಿ) ಸಂಯೋಜಿತ ವಾಕ್ಯ (ಡಿ) ಮಿಶ್ರ ವಾಕ್ಯ



https://www.karnatakaboard.com/

50. ತತ್ಪುರುಷ ಸಮಾಸಕ್ಕೆ ಉದಾಹರಣೆಯಿದು

(ಎ) ತಲೆನೋವು (ಬಿ) ಮೈಮುಚ್ಚು

(ಸಿ) ಮುಕ್ಕಣ್ಣ (ಡಿ) ಗಿರಿವನಗಳು

51. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸಲಾಗುವ ಲೇಖನ ಚಿಹ್ನೆ

(ಎ) ಉದ್ಧರಣ ಚಿಹ್ನೆ (ಬಿ) ವಿವರಣಾತ್ಮಕ ಚಿಹ್ನೆ

(ಸಿ) ಆವರಣ ಚಿಹ್ನೆ (ಡಿ) ವಾಕ್ಯವೇಷ್ಟನ ಚಿಹ್ನೆ

52. 'ಇಂಗ್ಲಿಷ್'ನಿಂದ ಕನ್ನಡಕ್ಕೆ ಬಂದಿರುವ ಪದವಿದು

(ಎ) ಮೇಜು (ಬಿ) ಕಾಗದ

(ಸಿ) ಗಲೀಜು (ಡಿ) ಕಾಲೇಜು

53. 'ಮಾಡು' ಪದದ ನಿಷೇಧಾರ್ಥಕ ರೂಪವಿದು

(ಎ) ಮಾಡಲಿ (ಬಿ) ಮಾಡಿಯಾನು

(ಸಿ) ಮಾಡನು (ಡಿ) ಮಾಡುವನು

54. 'ಒಳ್ಳೆಯ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

(ಎ) ಸಂಖ್ಯಾವಾಚಕ (ಬಿ) ಸಂಖ್ಯೇಯವಾಚಕ

(ಸಿ) ಪರಿಮಾಣವಾಚಕ (ಡಿ) ಗುಣವಾಚಕ

55. ತದ್ಧಿತಾಂತ ನಾಮಪದಕ್ಕೆ ಉದಾಹರಣೆ ಇದು

(ಎ) ಬಡತನ (ಬಿ) ನಿನಗಾಗಿ

(ಸಿ) ಕನ್ನಡಿಗ (ಡಿ) ಬರೆಯುವ

**ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** $4 \times 1 = 4$

56. ಸತಿಪತಿ : ಜೋಡುನುಡಿ :: ತುತ್ತತುದಿ : .......................... .

57. ಆರ್ತತೆ : ಬಯಕೆ :: ಅಂತಃಕರಣ : .......................... .

58. ಪುಣ್ಯ : ಹೂನ್ಯ :: ಚೀರ : .......................... .

59. ಓಡಿದ : ಕೃದಂತನಾಮ :: ನೆನಪು : .......................... .

60. **ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** $1 \times 3 = 3$

'ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ'

***ಅಥವಾ***

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।
ನೊರ್ವನೇ ವೀರನಾತನ ಯಜ್ಞ ತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥



https://www.karnatakaboard.com/

61. **ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** 1 × 3 = 3

"ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆದಂತೆ"

***ಅಥವಾ***

"ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮೀಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು"

## ವಿಭಾಗ – 'ಸಿ'

### (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

62. **ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ *ಒಂದನ್ನು* ವಿಸ್ತರಿಸಿ ಬರೆಯಿರಿ :** 1 × 3 = 3

* ಕಾಯಕವೇ ಕೈಲಾಸ
* ದೇಶ ನೋಡು; ಕೋಶ ಓದು
* ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿಯಿಲ್ಲ

63. ನಿಮ್ಮನ್ನು ಬೆಳಗಾವಿಯ ಸಂಗೊಳ್ಳಿ ರಾಯಣ್ಣ ಪ್ರೌಢಶಾಲೆಯ 'ಶ್ರೀಲತಾ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ 'ವಿಶ್ವ ಕೈತೊಳೆಯುವ ದಿನಾಚರಣೆ'ಯ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ 'ಕನ್ನಡಪ್ರಭ' ದಿನಪತ್ರಿಕೆಯ ಸಂಪಾದಕರಿಗೆ ಒಂದು ಮನವಿ ಪತ್ರ ಬರೆಯಿರಿ. 1 × 5 = 5

***ಅಥವಾ***

ನಿಮ್ಮನ್ನು ಬಸವನ ಬಾಗೇವಾಡಿಯ ಸರ್ಕಾರಿ ಪ್ರೌಢಶಾಲೆಯ 'ತೇಜಸ್' ಎಂದು ಭಾವಿಸಿಕೊಂಡು ಧಾರವಾಡದ ಸಾಧನಕೇರಿಯಲ್ಲಿರುವ ಸ್ನೇಹಿತ 'ಶ್ರವಣಕುಮಾರನಿಗೆ' ಪರೀಕ್ಷಾ ತಯಾರಿ ಕುರಿತು ಒಂದು ಪತ್ರ ಬರೆಯಿರಿ.

64. **ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ *ಒಂದನ್ನು* ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :** 1 × 5 = 5

* ದೇಶದ ರಕ್ಷಣೆಯಲ್ಲಿ ಸೈನಿಕರ ಪ್ರಾಮುಖ್ಯತೆ
* ಪರಿಸರ ಮಾಲಿನ್ಯ ತಡೆಗಟ್ಟುವಲ್ಲಿ ಸಮುದಾಯದ ಪಾತ್ರ
* ಆಧುನಿಕ ಶಿಕ್ಷಣದಲಿ ಕಂಪ್ಯೂಟರ್‌ನ ಮಹತ್ವ



https://www.karnatakaboard.com/

https://www.karnatakaboard.com/